2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ140/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪಲ್ಲವಿ | ಪಿಡಬ್ಲೂ-1 |
| ಗಂಡನ ಹೆಸರು | - | ಕಿರಣ್ ಕುಮಾರ್ | ಸಿಡಬ್ಲೂ - 1 |
| ವಯಸ್ಸು | - | 25 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸ ಸ್ಥಳ | - | ಬೆಂಗಳೂರು | |

ದಿನಾಂಕಃ 23.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ನನ್ನ ಗಂಡ. ಚಾಸಾ.3 ನನ್ನ ತಾಯಿ. ಚಾಸಾ.2 ನಮ್ಮ ಮನೆಯ ಮಾಲೀಕರು. ಚಾಸಾ.7 ನನ್ನ ಅಜ್ಜಿ. ಚಾಸಾ.4 ರಿಂದ ಚಾಸಾ.6 ರವರು ಗೊತ್ತು.

2. ದಿನಾಂಕ 04.05.2014 ರಂದು ನನ್ನ ಮದುವೆ ಆರೋಪಿಯೊಂದಿಗೆ ನನ್ನ ಮದುವೆ ಚಿಕ್ಕಮಗಳೂರಿನ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಸಂಪ್ರದಾಯದಂತೆ ನೆರವೇರಿರುತ್ತದೆ. ಮದುವೆಯಾದ ನಂತರ ತಡಬೇನಹಳ್ಳಿಯಲ್ಲಿರುವ ನನ್ನ ಗಂಡನ ಮನೆಯಲ್ಲಿ ನನ್ನ ಗಂಡನೊಂದಿಗೆ ವಾಸವಾಗಿದ್ದೆನು. ನನ್ನ ಗಂಡನ ಮನೆಯಲ್ಲಿ ನನ್ನ ಗಂಡ ಮತ್ತು ಅತ್ತೆ ಮಾವ ಇದ್ದರು. ಮದುವೆಯಾದ ಬಳಿಕ 6-7 ತಿಂಗಳ ಕಾಲ ನಾನು, ನನ್ನ ಗಂಡ ಅನ್ಯೂನ್ಯವಾಗಿದ್ದೆವು.

ನಂತರ ನಾನು ಗರ್ಭಿಣಿಯಾದ ಬಳಿಕ ಬೆಂಗಳೂರಿನಲ್ಲಿರುವ ನನ್ನ ತಾಯಿಯ ಮನೆಗೆ ಹೋದೆನು. ಅಲ್ಲಿ ನಾನು ಹೆಣ್ಣು ಮಗುವಿಗೆ ಜನ್ಮ ನೀಡಿದೆನು. ನಂತರ ನಾನು ಬಾಣಂತನ ಮುಗಿಸಿಕೊಂಡು ನನ್ನ ಗಂಡನ ಮನೆಗೆ ವಾಪಾಸ್ಸು ಹೋದೆನು. ಆ ರೀತಿ ನನ್ನ ಗಂಡನ ಮನೆಗೆ ವಾಪಾಸ್ಸು ಹೋದ 2 ತಿಂಗಳ ಬಳಿಕ ನನ್ನ ಗಂಡ ಉದ್ದೇಬೋರನಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಅಲ್ಲಿ ನಾನು ನನ್ನ ಗಂಡ ಮತ್ತು ನಮ್ಮ ಮಗಳು ವಾಸವಾಗಿದ್ದೆವು.

3. ದಿನಾಂಕ 01.06.2016 ರಂದು ರಾತ್ರಿ 8.30 ಗಂಟೆಗೆ ನಾನು ಮಗುವಿಗೆ ಹಾಲನ್ನು ಕುಡಿಸುತ್ತಾ ಮಲಗಿಕೊಂಡಿದ್ದೆನು. ಆಗ ಆರೋಪಿ ಬಂದು ನಾನು ಮಲಗಿಕೊಂಡಿದ್ದನ್ನು ನೋಡಿ ಊಟ ಮಾಡಿ ಮಲಗಿಕೊಂಡಿದ್ದೀಯಾ, ಬೇವರ್ಸಿ ಮುಂಡೆ ಎಂದು ಅವಾಚ್ಯವಾಗಿ ಬೈದನು. ಮಂಚದ ಮೇಲೆ ಮಲಗಿದ್ದ ನನ್ನನ್ನು ಕೆಳಗೆ ಎಳೆದು ನನ್ನ ತಲೆಯನ್ನು ಹಿಡಿದು ನೆಲಕ್ಕೆ ಗುದ್ದಿದನು. ಆಗ ನನಗೆ ಪ್ರಜ್ಞೆ ಇಲ್ಲದಂತಾಯಿತು. ನಂತರ ನಾನು ಎಚ್ಚರಗೊಂಡಾಗ ನನ್ನ ಬಲಭಾಗದ ತಲೆಯಲ್ಲಿ ರಕ್ತ ಬರುತ್ತಿತ್ತು. ಆಗ ನಮ್ಮ ಮನೆಯ ಮಾಲೀಕರಾದ ಚಾಸಾ.2 ರವರು ಬಂದು ಜಗಳವನ್ನು ಬಿಡಿಸಿದರು ಮತ್ತು 108 ಆ್ಯಂಬುಲೆನ್ಸ್‌ನಲ್ಲಿ ನನ್ನನ್ನು ನನ್ನ ಮಗಳೊಂದಿಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು. ಆಸ್ಪತ್ರೆಯಲ್ಲಿ ನನ್ನ ತಲೆಗೆ ಆಗಿದ್ದ ಗಾಯಕ್ಕೆ ಚಿಕಿತ್ಸೆ ಕೊಟ್ಟು 8 ಹೊಲಿಗೆಗಳನ್ನು ಹಾಕಿದರು. ಮಾರನೇ ದಿನ ಸಖರಾಯಪಟ್ಟಣ ಪೊಲೀಸರು ನಾನು ಚಿಕಿತ್ಸೆ ಪಡೆಯುತ್ತಿದ್ದ

ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡು ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ.

4. ಸಾಕ್ಷಿಯು ಹೇಳಿಕೆಯ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆಯ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

5. ಮಾರನೇ ದಿನ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹೋಗಿದ್ದೆನು. ಅಲ್ಲಿ ಪೊಲೀಸರು ನನ್ನನ್ನು ಪುನಃ ವಿಚಾರಿಸಿದರು. ಆಗ ನಾನು ಘಟನೆಯ ಬಗ್ಗೆ ತಿಳಿಸಿದೆನು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

6. ನಿಮ್ಮ ಮಗಳು ಜನಿಸಿದ 1 ವರ್ಷದ ನಂತರ ಆರೋಪಿ ನಿಮ್ಮ ಮೇಲೆ ಅನುಮಾನಪಡುತ್ತಾ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಾ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡುತ್ತಿದ್ದನು ಎಂದರೆ ಸರಿ. ಘಟನೆ ನಡೆದಾಗ ಸಮಯ ರಾತ್ರಿ 8.15 ಗಂಟೆಯಾಗಿತ್ತು ಎಂದರೆ ಸರಿ. ನಿಮ್ಮ ಗಂಡ ಹಲ್ಕ ಲೌಡಿ ನಾನು ಮನೆಗೆ ಬಂದರೂ ನನ್ನನ್ನು ವಿಚಾರಿಸದೇ ಮಲಗಿಕೊಳ್ಳುತ್ತೀಯಾ ಎಂದು ನಿಮ್ಮ ತಲೆಕೂದಲನ್ನು ಹಿಡಿದು ನೆಲಕ್ಕೆ ನಿಮ್ಮ ತಲೆಯನ್ನು ಗುದ್ದಿ ರಕ್ತಗಾಯಪಡಿಸಿದನು ಎಂದರೆ

ಸರಿ. ಆಗ ನೀವು ಕಿರುಚಿಕೊಂಡಾಗ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದಾನೆ ಎಂದರೆ ಸರಿ.

7. ದಿನಾಂಕ 24.10.2016 ರಂದು ನೀವು ಪೊಲೀಸ್ ಠಾಣೆಗೆ ಹೋಗಿ ದಿನಾಂಕ 01.06.2016 ರಂದು ರಾತ್ರಿ 8.15 ಗಂಟೆಗೆ ಘಟನೆ ನಡೆದಿರುತ್ತದೆ ಎಂದು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

(ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.